**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.31/2020**

| | | | |
|---|---|---|---|
| ಸಾಕ್ಷಿದಾರರ ಹೆಸರು | ಮಹೇಶ ಮಲ್ಲನಗೌಡ್ರ | ಸಿಡಬ್ಲ್ಯೂ | 4 |
| ತಂದೆ ಹೆಸರು | ದಾನಪ್ಪ | ಪಿಡಬ್ಲ್ಯೂ | 5 |
| ವಯಸ್ಸು | 31 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಕುರುಬಗೊಂಡ | | |

**ದಿಃ 06.02.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

1). ನನಗೆ ಚಾ.ಸಾ-1 ದೊಡ್ಡಪ್ಪನಾಗಬೇಕು. ಚಾ.ಸಾ-2 ಮತ್ತು 3 ಪರಿಚಯ ಇರುತ್ತಾರೆ. ದಿನಾಂಕಃ 17.09.2019 ರಂದು ನಾನು ಕರ್ನಾಟಕ ಬೀಜ ಸಂರಕ್ಷಣಾ ಸಂಸ್ಥೆ ಕಛೇರಿ ಇರುವ ಸ್ಥಳವಾದ ಹಾವೇರಿಯ ದಾನೇಶ್ವರಿ ನಗರದ 4 ನೇ ಕ್ರಾಸಗೆ ಚಾ.ಸಾ-1 ನನ್ನ ದೊಡ್ಡಪ್ಪನಾದ ಮುತ್ತನಗೌಡ ಈತನು ನನಗೆ ಮಾತನಾಡಿಸಲು ಬಂದಿದ್ದನು. ಸದರಿ ಚಾ.ಸಾ-1 ನಾನು ಕೆಲಸ ಮಾಡುವ ಕಚೇರಿಯಲ್ಲಿ ಮುಕ್ಕಾಲು ಘಂಟೆ ಮಾತ್ರ ಇದ್ದರು. ಆ ನಂತರ ಚಾ.ಸಾ-1 ಮುದ್ದನಗೌಡ ನನ್ನ ದೊಡ್ಡಪ್ಪ ನಮ್ಮ ಕಛೇರಿಯಿಂದ ಹೊರಗಡೆ ಬಂದು ನೋಡಿದಾಗ ನಮ್ಮ ಕಚೇರಿಯ ಮುಂದೆ ನಿಲ್ಲಿಸಿದ್ದ ಬೈಕ ಕಳ್ಳತನವಾಗಿತ್ತು. ನನ್ನ ದೊಡ್ಡಪ್ಪನಾದ ಚಾ.ಸಾ-1 ಮುತ್ತನಗೌಡ ಈತನಿಗೆ ಸೇರಿದ ಮೋಟಾರ ಸೈಕಲನ ಬಣ್ಣ ನೀಲಿ ಬಣ್ಣದ್ದಾಗಿತ್ತು. ಅದರ ನೊಂದಣಿ ಸಂಖ್ಯೆಃ ಕೆಎ-27/ಇಹೆಚ್ -7528 ಆಗಿರುತ್ತದೆ.

2) ನಂತರ ನಮ್ಮ ದೊಡ್ಡಪ್ಪನಾದ ಚಾ.ಸಾ-1 ಮುತ್ತನಗೌಡ ಮತ್ತು ನಾನು ಮದ್ಯಾಹ್ನ 2-30 ಘಂಟೆಯಿಂದ 4-30 ಘಂಟೆಯವರೆಗೆ ಚಾ.ಸಾ-1 ವರಿಗೆ ಸೇರಿದ ಮೋಟಾರ ಸೈಕಲನ್ನು ಹುಡುಕಾಡಿದಾಗ ಮೋಟಾರ ಸೈಕಲ್ ಸಿಗದೇ ಇದ್ದಾಗ ಚಾ.ಸಾ-1 ಮುತ್ತನಗೌಡ ನನ್ನ ದೊಡ್ಡಪ್ಪ ಈತನು ಪೊಲೀಸ

ಠಾಣೆಗೆ ಹೋಗಿ ದಿನಾಂಕಃ 03.08.2019 ರಂದು ಪಿರ್ಯಾದಿ ಕೊಟ್ಟಿರುತ್ತಾರೆ. ಆ ರೀತಿ ಚಾ.ಸಾ-1 ಪೊಲೀಸ ಠಾಣೆಗೆ ಪಿರ್ಯಾದಿ ಕೊಟ್ಟ ನಂತರ ಸಹ ಆತನಿಗೆ ಸೇರಿದ ಮೋಟಾರ ಸೈಕಲ್ ಸಿಕ್ಕಿರುವದಿಲ್ಲ. ಆ ನಂತರ ಚಾ.ಸಾ-1 ನನ್ನ ದೊಡ್ಡಪ್ಪನಾದ ಮುತ್ತನಗೌಡ ಈತನ ಮೋಟಾರ ಸೈಕಲ ಏನಾಗಿರುತ್ತದೆ ಎಂದು ನನಗೆ ಗೊತ್ತಿರುವದಿಲ್ಲ ಮತ್ತು ಅದು ಏನಾಗಿರುತ್ತದೆ ಎಂದು ಗೊತ್ತಿರುವದಿಲ್ಲ ಮತ್ತು ಆ ಬಗ್ಗೆ ಪೊಲೀಸರ ಸಮಕ್ಷಮ ಯಾವುದೇ ಮರುಹೇಳಿಕೆ ಕೊಟ್ಟಿರುವದಿಲ್ಲ. ನಾನು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಲು ಆಗುವದಿಲ್ಲ, ಏಕೆಂದರೆ ಈ ಮೊದಲು ನಾನು ಅವರನ್ನು ಎಲ್ಲಿಯೂ ನೋಡಿರುವದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಹಿ.ಸ.ಸ ಅಭಿಯೋಜಕರಿಂದಃ**

3) ದಿನಾಂಕಃ 03.08.2019 ರಂದು ಚಾ.ಸಾ-1 ಮುತ್ತನಗೌಡ ಇವರು ಆತನ ಮೋಟಾರ ಸೈಕಲ ಕಳ್ಳತನವಾದ ಬಗ್ಗೆ ದೂರನ್ನು ಕೊಟ್ಟ ನಂತರ ಪೊಲೀಸರು ನನ್ನನ್ನು ಮತ್ತು ಚಾ.ಸಾ-1 ಇವರನ್ನು ಪೊಲೀಸ ಠಾಣೆಗೆ ಕರೆಯಿಸಿ ಸದರಿ ಆರೋಪಿಗಳೇ ಮೋಟಾರ ಸೈಕಲನ್ನು ಕಳ್ಳತನ ಮಾಡಿರುತ್ತಾರೆ ಎಂದು ಮರುಹೇಳಿಕೆ ಪಡೆದಿರುತ್ತಾರೆ ಅಂದರೆ ಸರಿಯಲ್ಲ. ಅದೇ ರೀತಿ 5 ಮತ್ತು 6 ಇವರಿಗೆ ಸೇರಿದ ಗುಜರಿ ಅಂಗಡಿಗೆ ಚಾ.ಸಾ-1 ಮುತ್ತನಗೌಡ ಇವರಿಗೆ ಸೇರಿದ ಮೋಟಾರ ಸೈಕಲನ್ನು ಗುಜರಿ ಅಂಗಡಿಗೆ ಗುಜರಿ ಹಾಕಿರುತ್ತಾರೆ ಅಂದರೆ ನನಗೆ ಗೊತ್ತಿರುವದಿಲ್ಲ. ಚಾ.ಸಾ-1 ಮುತ್ತನಗೌಡ ಇವರಿಗೆ ಸೇರಿದ ಮೋಟಾರ ಸೈಕಲನ್ನು 5 ಮತ್ತು 6 ನೇ ಆರೋಪಿ ಗುಜರಿಗೆ ಹಾಕಿ ನಂತರ ಎರಡು ನಂಬರ ಪ್ಲೇಟಗಳನ್ನು ವಶಕ್ಕೆ ಪಡೆದಿದ್ದು ಆ ಎರಡು ಪ್ಲೇಟಗಳನ್ನು ನನಗೆ ತೋರಿಸಿರುತ್ತಾರೆ ಅಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿ.ಪಿ-6 ಎಂದು ಗುರುತಿಸಲಾಯಿತು. ನಿ.ಪಿ-6 ಮರುಹೇಳಿಕೆಯಲ್ಲಿ ಬರೆದಿರುವಂತಹ

ಸಂಗತಿಗಳು ನನಗೆ ಗೊತ್ತಿರುವದಿಲ್ಲ. ನಿ.ಪಿ-6 ಮರುಹೇಳಿಕೆಯಲ್ಲಿ ಬರೆದಿರುವಂತಹ ಎಲ್ಲ ಸಂಗತಿಗಳು ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಎಲ್ಲ ಆರೋಪಿತರ ಪರವಾಗಿ ವಕೀಲರು ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.